ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 23/7/20

**ಪರಿಷತ್‌ಗೆ ನಾಮನಿರ್ದೇಶಿತರ ಪರಿಚಯ**

# ಶಿಕ್ಷಣ ತಜ್ಞ ಸಾಬಣ್ಣಗೆ ಪರಿಷತ್ ಸ್ಥಾನದ ಗೌರವ

## ಅಧ್ಯಯನ, ಅಧ್ಯಾಪನದಿಂದ ಹಿರಿಯರ ಮನೆಗೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹಳ್ಳಿಯ ಬಡ ಕುಟುಂಬದಲ್ಲಿ ಬೆಳೆದು, ಉನ್ನತ ಶಿಕ್ಷಣ ಪಡೆದು ಕಳೆದ ಮೂವತ್ತು ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಯನ, ಅಧ್ಯಾಪನದಲ್ಲಿ ತೊಡಗಿಸಿಕೊಂಡಿರುವ ಡಾ. ತಳವಾರ್ ಸಾಬಣ್ಣ ಅವರು ಹಿರಿಯರ ಮನೆ ಎನಿಸಿಕೊಂಡ ವಿಧಾನ ಪರಿಷತ್‌ಗೆ ನಾಮಕರಣಗೊಂಡಿದ್ದಾರೆ.

56 ವರ್ಷದ ಡಾ. ತಳವಾರ ಸಾಬಣ್ಣ ಕಲಬುರಗಿಯಲ್ಲಿ ಹಳ್ಳಿಯ ಬಡ ಕುಟುಂಬದಲ್ಲಿ ಬೆಳೆದು ಅರ್ಥಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮಾಡಿರುವ ಅವರು 30 ವರ್ಷದಿಂದ ಶಿಕ್ಷಣ ಕ್ಷೇತ್ರದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನ ನೀಡುತ್ತಾ ಬಂದಿದ್ದಾರೆ. ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಕಾರ್ಯ ಮಾಡುತ್ತಿದ್ದಾರೆ.

ಪ್ರಸ್ತುತ ಬೆಳಗಾವಿ ರಾಣಿ ಚೆನ್ನಮ್ಮ ವಿವಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾರೆ.



**'ರಾಜ್ಯ ಸರ್ಕಾರ ನನ್ನನ್ನು ಗುರುತಿಸಿ ವಿಧಾನ ಪರಿಷತ್‌ಗೆ ಆಯ್ಕೆ ಮಾಡಿದೆ. ಆಯ್ಕೆ ಕುರಿತಂತೆ ನನಗೆ ಮೊದಲು ಯಾವುದೇ ಮಾಹಿತಿ ಇರಲಿಲ್ಲ. ಸೇವಾ ವಲಯದಲ್ಲಿ ನನಗೆ ಸಿಕ್ಕ ಈ ಅವಕಾಶವನ್ನು ಉತ್ತಮವಾಗಿ ಬಳಸಿಕೊಳ್ಳುತ್ತೇನೆ. ಶಿಕ್ಷಣ ಸುಧಾರಣೆ ತರುತ್ತೇನೆ.**

• **ಸಾಬಣ್ಣ ತಳವಾರ್**
ವಿಧಾನಪರಿಷತ್ ನೂತನ ನಾಮನಿರ್ದೇಶಿತ ಸದಸ್ಯ

# ಶಾಸನಸಭೆಗೆ ಸಿದ್ದಿ ಜನಾಂಗದ ಮೊದಲಿಗ ಶಾಂತಾರಾಮ

## ಪರಿಸರವಾದಿ, ಸಂಘ ಪರಿವಾರದ ಕಾರ್ಯಕರ್ತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅತ್ಯಂತಚಿಕ್ಕಹಾಗೂಬಡಸಮುದಾಯವಾಗಿರುವ ಸಿದ್ದಿ ಸಮಾಜದಲ್ಲಿ ಹುಟ್ಟಿ ಸಮುದಾಯದ ಮೊದಲು ಪದವಿ ಪಡೆದ ಹೆಗ್ಗಳಿಕೆಗೆ ಪಾತ್ರರಾಗಿ, ಪಶ್ಚಿಮ ಘಟ್ಟದ ವನವಾಸಿಗಳ ನಡುವೆ ಇದ್ದುಕೊಂಡು ಸೇವೆ ಮಾಡುತ್ತಾ ಬಂದಿರುವ ಶಾಂತಾರಾಮ ಬುಡನ ಸಿದ್ದಿ (55) ಅವರು ಈಗ ವಿಧಾನ ಪರಿಷತ್ ಸದಸ್ಯರು. ಸಿದ್ದಿ ಸಮುದಾಯದ ಮೊದಲ ವ್ಯಕ್ತಿ ಹಿರಿಯರ ಮನೆ ಪ್ರವೇಶಿಸುತ್ತಿರುವುದು ದಾಖಲೆ.

ಸಿದ್ದಿ ಮೂಲತಃ ಶಿರಸಿ- ಯಲ್ಲಾಪುರ ಮಧ್ಯದ ಹಿತ್ಲಳ್ಳಿ ಗ್ರಾಮದವರು. ಸಿದ್ದಿ ಸಮುದಾಯದಲ್ಲೇ ಮೊದಲ ಬಾರಿಗೆ ಪದವಿ ಪಡೆದ ವ್ಯಕ್ತಿ. ಶಾಂತಾರಾಮ, ಪಶ್ಚಿಮ ಘಟ್ಟ ಕಾರ್ಯಪಡೆ ಸದಸ್ಯ. ಆರ್‌ಎಸ್‌ಎಸ್‌ನ ಕಾರ್ಯಕರ್ತ.



**ಸಿದ್ದಿ ಜನಾಂಗದ ಶೈಕ್ಷಣಿಕ ಪ್ರಗತಿ ನನ್ನ ಆರಂಭದ ಗುರಿಯಾಗಿತ್ತು. ಎಲ್ಲ ವನವಾಸಿಗಳನ್ನು ಸೇರಿಸಿ ಅವರಿಗಾಗಿ ದುಡಿಯುತ್ತಿದ್ದೇನೆ. ಈಗ ನನ್ನ ನಾಮನಿರ್ದೇಶನ ಸಂತಸ ತಂದಿದೆ. ಇದು ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ.**

• **ಶಾಂತಾರಾಮ ಸಿದ್ದಿ**
ವಿಧಾನಪರಿಷತ್ ನೂತನ ನಾಮನಿರ್ದೇಶಿತ ಸದಸ್ಯ